ಓ.ಎಸ್ ನಂ. 18/2022 ಪಿ.ಡಬ್ಲೂಃ 1

ದಿನಾಂಕಃ 04.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಪಾಟೀಸವಾಲು ಪ್ರತಿವಾದಿಯ ಪರ ಶ್ರೀ. ಹೆಚ್.ಎಸ್ ವಕೀಲರಿಂದ

ನನ್ನ ತಾಯಿ 1986 ಇಸವಿಯಲ್ಲಿ ತೀರಿಕೊಂಡಿರುತ್ತಾರೆ, ದಿನಾಂಕ , ತಿಂಗಳು ನನಗೆ ನೆನಪಿಲ್ಲ. ನನಗೆ ಈಗ 44 ವರ್ಷ ವಯಸ್ಸು. 1ನೇ ವಾದಿಗೆ 50 ವರ್ಷ ವಯಸ್ಸು, 3ನೇ ವಾದಿಗೆ 40 ವರ್ಷ ವಯಸ್ಸು ಆಗಿರುತ್ತದೆ. ನನ್ನ ತಾಯಿ ತೀರಿಕೊಂಡಾಗ ನನಗೆ 6 ವರ್ಷ ವಯಸ್ಸಾಗಿತ್ತು, 1ನೇ ವಾದಿಗೆ 12 ವರ್ಷ ವಯಸ್ಸಾಗಿತ್ತು, 3 ನೇ ವಾದಿಗೆ 4 ವರ್ಷ ವಯಸ್ಸಾಗಿದ್ದವು. ನನ್ನ ತಂದೆಗೆ ಪಿತ್ರಾರ್ಜಿತವಾಗಿ 8 ಎಕರೆ ಆಸ್ತಿ ಇದೆ. ಸಾಕ್ಷಿ ಮುಂದುವರೆದು ದಾವಾ ಆಸ್ತಿ ನನ್ನ ತಾಯಿ ಖರೀದಿ ಮಾಡಿರುವ ಆಸ್ತಿ ಎಂದು ನುಡಿಯುತ್ತಾರೆ. ನನ್ನ ತಾಯಿ ಜೀವಂತ ಇದ್ದಾಗ ನನ್ನ ತಂದೆಗೆ ಬಂದಂತ ಪಿತ್ರಾರ್ಜಿತ ಆಸ್ತಿಯಲ್ಲಿ ಸಾಗುವಳಿ ಮಾಡುತ್ತಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

ನನ್ನ ತಾಯಿ ದಾವಾ ಆಸ್ತಿಗಳನ್ನು 1972 ನೇ ಇಸವಿಯಲ್ಲಿ ಖರೀದಿ ಮಾಡಿರುತ್ತಾರೆ. ನನ್ನ ತಾಯಿ ದಾವಾ ಆಸ್ತಿಗಳನ್ನು ಹೇಗೆ ಖರೀದಿ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ಮಾಹಿತಿ ಇದೆ, ನನ್ನ ತಾಯಿ ಕೂಲಿ ಕೆಲಸ ಮಾಡುತ್ತಿದ್ದರು, ನನ್ನ ಮಾವಂದಿರು ಸಹಾ ನನ್ನ ತಾಯಿಗೆ ಅಷ್ಟೋ ಇಷ್ಟೋ ಸಹಾಯ ಮಾಡಿ ಅದರಿಂದ ನನ್ನ ತಾಯಿ ದಾವಾ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ ತೀರಿಕೊಂಡಾಗ 2 ಅಥವಾ 3 ನೇ ತರಗತಿಯಲ್ಲಿ ಓದುತ್ತಿದ್ದೆ, 1ನೇ ವಾದಿ 9ನೇ ತರಗತಿ ಓದುತ್ತಿದ್ದ, 3ನೇ ವಾದಿ 2ನೇ ತರಗತಿ ಓದುತ್ತಿದ್ದಳು. ನನ್ನ ತಾಯಿ ತೀರಿಕೊಂಡ ನಂತರ ದಾವಾ ಆಸ್ತಿಗಳಲ್ಲಿ ವ್ಯವಸಾಯವನ್ನು ನಾವೇ ಮಾಡುತ್ತಿದ್ದೇವು, ಈಗಲೂ

ಸಹಾ ನಾವೇ ದಾವಾ ಆಸ್ತಿಯನ್ನು ಅನುಭವ ಮಾಡುತ್ತಿದ್ದೇವೆ.

ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಖಾತೆ ಯಾವ ವರ್ಷದಲ್ಲಿ ಆಗಿದೆ ಎಂದು ಮಾಹಿತಿ ಇದೆಯ ಎಂದರೆ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲ ಆದರೆ ಸರ್ಕಾರದ ಸೌಲತ್ತುಗಳ ಬಗ್ಗೆ ತಿಳಿದುಕೊಳ್ಳುವ ಸಲುವಾಗಿ ದಾವಾ ಆಸ್ತಿಗಳ ಪಹಣಿಯನ್ನು ತೆಗೆಸಿನೋಡಿದಾಗ ಪ್ರತಿವಾದಿಯ ಹೆಸರು ದಾಖಲಾದ ವಿಷಯ ಗೊತ್ತಾಯಿತು ಎಂದು ನುಡಿಯುತ್ತಾರೆ. ಖಾತೆ ಬದಲಾವಣೆಯನ್ನು ಪ್ರಶ್ನೆ ಮಾಡಿ ಕಂದಾಯ ನ್ಯಾಯಾಲಯದಲ್ಲಿ ಅಪೀಲು ಮಾಡಿರುತ್ತೀರ ಎಂದರೆ ಸಾಕ್ಷಿ ಅಪೀಲು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಈ ಪ್ರಕರಣ ದಾಖಲು ಮಾಡುವುದಕ್ಕಿಂತ 1 ವಾರದ ಮುಂಚೆ ಕಂದಾಯ ನ್ಯಾಯಾಲಯದಲ್ಲಿ ಅಪೀಲು ಮಾಡಿರುತ್ತೇವೆ. ಅಪೀಲು ಏನಾಯಿತು ಎಂದು ನನಗೆ ಗೊತ್ತಿಲ್ಲ. ಅಪೀಲು ಇನ್ನು ಪೆಂಡಿಂಗ್ ಇರಬಹುದು ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ.

ಪ್ರತಿವಾದಿಯನ್ನು ನನ್ನ ತಂದೆ ಯಾವ ವರ್ಷದಲ್ಲಿ ಮದುವೆಯಾಗಿರುತ್ತಾರೆ ಎಂದರೆ ಸಾಕ್ಷಿ ವರ್ಷ ಗೊತ್ತಿಲ್ಲ, ಆದರೆ ನನ್ನ ತಾಯಿ ತೀರಿಕೊಂಡ 3 ವರ್ಷದ ನಂತರ ಮದುವೆಯಾಗಿರಬಹುದು ಎಂದು ನುಡಿಯುತ್ತಾರೆ. ಪ್ರತಿವಾದಿ ಬಸವನಾಯ್ಕನಹಳ್ಳಿ ಗ್ರಾಮದವರು. ಪ್ರತಿವಾದಿಯ ತಂದೆ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಎಷ್ಟು ಜನ ಸಹೋದರ, ಸಹೋದರಿಯರು ಇರುತ್ತಾರೆ ಎಂದರೆ ಸಾಕ್ಷಿ ನಮಗೂ ಅವರಿಗೂ ಸಂಪರ್ಕ ಇರುವುದಿಲ್ಲ ಹೀಗಾಗಿ ಅವರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಮದುವೆಯಾದ ನಂತರ ನನ್ನ ತಂದೆ ಪ್ರತಿವಾದಿಯನ್ನು ನಮ್ಮ ಊರಿಗೆ ಕರೆದುಕೊಂಡು ಬಂದಿದ್ದರು. ನಮ್ಮ ಊರಿನಲ್ಲಿ ನಾವು ಹಾಗೂ ಪ್ರತಿವಾದಿ ಒಟ್ಟಿಗೆ ಒಂದೇ ಮನೆಯಲ್ಲಿ ಇದ್ದೇವು. ಸಾಕ್ಷಿ ಮುಂದುವರೆದು ಪ್ರತಿವಾದಿ ನಮ್ಮನ್ನು ಸರಿಯಾಗಿ ನೋಡಿ ಕೊಳ್ಳದೇ ತುಂಬಾ ಹಿಂಸೆ ಮಾಡಿ, ಕೊಲೆ ಮಾಡಲು ಸಹಾ ಪ್ರಯತ್ನ ಮಾಡಿದರು ಹೀಗಾಗಿ ಸುಮಾರು 6 ತಿಂಗಳು ನಾವು ಅವರಿಂದ ಬೇರೆಯಾಗಿ ನಮ್ಮ ಮಾವನೇ ನಮಗೆ ಊಟ ಬಟ್ಟೆ ಕೊಟ್ಟು ಸಾಕಿದ್ದು ನಂತರ ನಮ್ಮ ತಾಯಿ ಜಮೀನಿನಲ್ಲಿ ವ್ಯವಸಾಯ ಮಾಡಿ ಜೀವನ ಮಾಡುತ್ತಿದ್ದೇವೆ

ಎಂದು ನುಡಿಯುತ್ತಾರೆ. ಅದೇ ಮನೆಯಲ್ಲಿ ಪ್ರತ್ಯೇಕ ಕೋಣೆಯಲ್ಲಿ ನಾವು ವಾಸವಾಗಿದ್ದೇವು. ಆಗ ಹೊಳೆನರಸೀಪುರದ ಚೇತನ ಶಾಲೆಯಲ್ಲಿ ನನ್ನ ಅಣ್ಣ 9 ನೇ ತರಗತಿ ಓದುತ್ತಿದ್ದ. ಆ ಸಮಯದಲ್ಲಿ ನಾನು ಕೃಷ್ಣಾಪುರ ಗ್ರಾಮದಲ್ಲಿಯೇ ವಿದ್ಯಾಭ್ಯಾಸ ಮಾಡುತ್ತಿದ್ದೆ. ನಮ್ಮೆಲ್ಲರ ಯೋಗ ಕ್ಷೇಮವನ್ನು ನನ್ನ ಮಾವ ನೋಡಿಕೊಳ್ಳುತ್ತಿದ್ದರು.

ನನ್ನ ಮಾವನವರು ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು, ಬೀರವಳ್ಳಿ ಗ್ರಾಮದವರು. ನನ್ನ ತಾಯಿಗೆ 4 ಜನ ಸಹೋದರಿಯರು, ಇಬ್ಬರು ಸಹೋದರು ಇರುತ್ತಾರೆ. ನನ್ನ ತಾಯಿಯ ಸಹೋದರರ ಹೆಸರು ಜವರೇಗೌಡ, ಕೃಷ್ಣೇಗೌಡ. ನನ್ನ ತಾಯಿಯ ಸಹೋದರಿಯರ ಹೆಸರು ಲಕ್ಷ್ಮಮ್ಮ, ಕನಕಮ್ಮ, ಸಾವಿತ್ರಮ್ಮ, ಸಣ್ಣಗಮ್ಮ ಎಂದು ಇರುತ್ತದೆ. ನನ್ನ ತಾಯಿಗಿಂತ ನನ್ನ ಮಾವ ಜವರೇಗೌಡ 5 ವರ್ಷ ಹಿರಿಯವರು ಇರುತ್ತಾರೆ. ನನ್ನ ತಾಯಿಗಿಂತ ನನ್ನ ಮಾವ ಕೃಷ್ಣೇಗೌಡ 2 ವರ್ಷ ಚಿಕ್ಕವರು ಇರುತ್ತಾರೆ. ನನ್ನ ತಾಯಿಗೆ ಹಾಗೂ ಅವರ ಸಹೋದರಿಯರಿಗೂ 2 ವರ್ಷ ಅಂತರ ಇರುತ್ತದೆ. ನನ್ನ ತಾಯಿಯ ತಂದೆಯವರಿಗೆ ಸುಮಾರು 10 ಎಕರೆ ಜಮೀನು ಇರಬಹುದು. ನಾವು ನೋಡಿದಂತೆ ಆಗಿನ ಕಾಲದಲ್ಲಿ ನನ್ನ ತಾಯಿಯ ತವರು ಮನೆಯವರು ತೆಂಗು, ಕಬ್ಬು, ಅಡಿಕೆ, ಭತ್ತ ಬೆಳೆಯುತ್ತಿದ್ದರು. ನನ್ನ ತಾಯಿಯ

ಮರುವಿಚಾರಣೆ : ಇಲ್ಲಾ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರು
ಹೊಳೆನರಸೀಪುರ.